# ಕೆಂಬೂತ

ನನ್ನ ಅಪ್ಪ ಥೇಟ್ ಕೆಂಬೂತದ ಥರ ಕಾಣ್ತಿದ್ದ. ಹೀಗೆ ಅನ್ನಿಸಿದಾಗ ನಾನಿನ್ನೂ ಚಿಕ್ಕ ಹುಡುಗ. ಒಂದು ದಿನ ಮ್ಯಾಗಜಿನ್‌ವೊಂದರಲ್ಲಿ ನಾನು ನೆಪೋಲಿಯನ್ ಚಿತ್ರ ನೋಡಿದ್ದೆ. ಗುಡಾಣ ಹೊಟ್ಟೆಯ ಅವನು ಮೈಗೆ ಜಿಂಕೆ ಚರ್ಮದ ಉಡುಪನ್ನು ತೊಟ್ಟು, ಕಾಲಿಗೆ ತುಂಡು ಶೂಗಳನ್ನು ಹಾಕಿಕೊಂಡು ಬಂಡೆಯೊಂದರ ಮೇಲೆ ನಿಂತಿದ್ದ. ಅವನನ್ನು ನೋಡಿದ ತಕ್ಷಣ ನನಗೆ ಇನ್ನಿಲ್ಲದ ನಗು ಬಂದುಬಿಟ್ಟಿತ್ತು. ಏಕೆಂದರೆ, ನನಗಾಗ ನೆಪೋಲಿಯನ್ ಪೆಂಗ್ವಿನ್ ಥರ ಕಾಣುತ್ತಿದ್ದ. ಅಂಥ ಹೊತ್ತಲ್ಲೇ 'ಅಪ್ಪ ಕೆಂಬೂತದ ಥರ ಇದಾನೆ,' ಅನ್ನುವ ಕೆಟ್ಟ ಭಾವನೆ ನನ್ನನ್ನು ಹೊಕ್ಕುಬಿಟ್ಟಿತ್ತು.

ನಾವಿದ್ದ ನಗರದಲ್ಲಿ ನನ್ನ ಅಪ್ಪ ತುಂಬಾ ಪ್ರಭಾವಿ ಹುದ್ದೆಯಲ್ಲಿದ್ದ. ಆ ನಗರ ಜಿಲ್ಲಾ ಕೇಂದ್ರವಾಗಿದ್ದು, ನನ್ನ ಅಪ್ಪನ ವ್ಯಕ್ತಿತ್ವದ ಮೇಲೆ ವಿನಾಶಕಾರಿ ಪರಿಣಾಮ ಬೀರಿತ್ತು. ನನಗೆ ಅನಿಸುವಂತೆ ಅವನಿದ್ದ ಸರ್ಕಾರಿ ನೌಕರರ ವಲಯದಲ್ಲಿ ಅವಸರವಿಲ್ಲದ ಮಾತು ಮತ್ತು ಕೆಲಸದ ಜೊತೆಗೆ ಅವನಷ್ಟು ದರ್ಪಿಷ್ಠ, ಸಿಡುಕ, ಮೌನಿ ಮತ್ತು ತಣ್ಣನೆಯ ಕ್ರೂರಿ ಮತ್ತೊಬ್ಬನಿರಲಿಲ್ಲ. ಕುಳ್ಳಗೆ, ದಪ್ಪಗೆ, ದುಂಡು ಹೆಗಲಿನ, ಕಪ್ಪನೆಯ ಒರಟು ಕೂದಲಿನ, ಉದ್ದನೆಯ ದಡಿ ಮೂಗಿನ, ಕಪ್ಪು ಚರ್ಮದ ಅವನು... ಅದರಲ್ಲೂ, ಗೌರ್ನರನ ಹೆಂಡತಿ ಪ್ರಾಯೋಜಿಸುತ್ತಿದ್ದ ಬಿಟ್ಟಿ ನೃತ್ಯ ಕೂಟಗಳಲ್ಲಿ ಭಾಗವಹಿಸುವಾಗ ಅವನು ಹಾಕುತ್ತಿದ್ದ ಕಪ್ಪನೆಯ ಕೋಟಿನಲ್ಲಿ, ತನ್ನ ಹಿರಿವ ಕಂಗಳಲ್ಲಿ ಕದ್ದು ಕದ್ದು ನೃತ್ಯ ಮಾಡುತ್ತಿರುವ ಜೋಡಿಯನ್ನು ನೋಡುವಾಗ... ನೃತ್ಯ ಕಟ್ಟೆಗೆ ಬರುವ ಜನರನ್ನು ಹಾಗೂ ನೃತ್ಯ ಕಟ್ಟೆಯಲ್ಲಿದ್ದ ತನ್ನ ಉದ್ದನೆಯ ಕೈಗಳ ತುಂಬಾ ಫಳಾರಿಸುವ ವಜ್ರದ ಬಳೆಗಳನ್ನು ತೊಟ್ಟು, ಮೋಹಕ ನಗೆ ನಗುತ್ತಾ ಮೋಟು ಗ್ಲಾಸುಗಳಲ್ಲಿ ಅಗ್ಗದ ಹಳದಿ ಶ್ಯಾಂಪೇನನ್ನು ಹಾಕುತ್ತಿದ್ದ ಪರಿಚಾರಿಕೆಯನ್ನು ದಿಟ್ಟಿಸುವಾಗ... ಅವನು ನಿಜಕ್ಕೂ ಕೆಂಬೂತದ ಥರವೇ ಕಾಣುತ್ತಿದ್ದ.

ನನ್ನ ಅಪ್ಪ ವಿಧುರನಾಗಿ ತುಂಬಾ ವರ್ಷಗಳೇ ಕಳೆದಿದ್ದವು. ಅವನಿಗೆ ಇಬ್ಬರೇ ಮಕ್ಕಳು. ನಾನು ಮತ್ತು ನನ್ನ ಎಂಟು ವರ್ಷದ ತಂಗಿ ಲೀಲ್ಯಾ. ನಮ್ಮ ಅಪಾರ್ಟ್‌ಮೆಂಟ್‌ನ ಬಲು ದೊಡ್ಡ ಮತ್ತು ಅತಿ ನಾಜೂಕಿನ ರೂಮುಗಳು, ನಿರ್ಭಾವದಿಂದ ವಾಸವಿರದಂತೆ ತೋರುವ ಪ್ರಭೆಯಲ್ಲಿ ಮಿನುಗುತ್ತಿದ್ದವು. ನಮ್ಮ ಅಪಾರ್ಟ್‌ಮೆಂಟ್ ಮೊದಲ ಮಹಡಿಯಲ್ಲಿದ್ದು ಅದು ನನ್ನ ಅಪ್ಪ ಕೆಲಸಕ್ಕಿದ್ದ ಇಲಾಖೆಗೆ ಸೇರಿದ್ದಾಗಿತ್ತು. ಅದೃಷ್ಟಕ್ಕೆ ನಾನು ಮಾಸ್ಕೋದಲ್ಲಿ ಬೋರ್ಡಿಂಗ್ ಶಾಲೆಯೊಂದರ ವಿದ್ಯಾರ್ಥಿಯಾಗಿದ್ದುಕೊಂಡು ಹೆಚ್ಚೂ ಕಡಿಮೆ ವರ್ಷವಿಡೀ ಅಲ್ಲೇ ಕಳೆಯುತ್ತಿದ್ದೆ. ಕ್ರಿಸ್ಮಸ್ ಹಬ್ಬ ಮತ್ತು ಬೇಸಿಗೆಯ ರಜಾ ದಿನಗಳಲ್ಲಿ ಮಾತ್ರ ಮನೆಗೆ ಬರುತ್ತಿದ್ದೆ. ಒಮ್ಮೆ ಹೀಗೆ ನಾನು ನನ್ನ ಸ್ಕೂಲಿನ ಓದನ್ನು ಮುಗಿಸಿ ಬೇಸಿಗೆ ರಜೆಗೆಂದು ಬರುವ ಹೊತ್ತಿಗೆ ಅನಿರೀಕ್ಷಿತವೊಂದು ನನಗಾಗಿ ಕಾದು ಕೂತಿತ್ತು.

ಮನೆಯನ್ನು ತಲುಪಿದಾಗ ನಾನು ನಿಜಕ್ಕೂ ದಿಗ್ಭ್ರಮೆಗೊಂಡೆ. ಈ ಮುಂಚೆ ತುಂಬಾ ವಿಷಾದಮಯನಾಗಿರುತ್ತಿದ್ದ ಸೂರ್ಯ ಇದ್ದಕ್ಕಿದ್ದಂತೆ ಜೀವ ತುಂಬಿಕೊಂಡು ನಮ್ಮ ಅಪಾರ್ಟ್‌ಮೆಂಟನ್ನು ಬೆಳಗತೊಡಗಿದ್ದ. ಇಡೀ ಅಪಾರ್ಟ್‌ಮೆಂಟ್ ಹರ್ಷ ಚಿತ್ತದ ಉಲ್ಲಾಸಭರಿತ